ಶ್ರೀ ಬಿ. ಎಚ್. ಬೋರಣ್ಣಗೌಡ.—1952-53 ರಲ್ಲಿ ಬಾಕಿ ಡಿಸ್ಟ್ರಿಕ್ಟ್‌ಗಳಿಗೆ ಖರ್ಚುಮಾಡಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಖರ್ಚುಮಾಡಿದೆ. ವಿವರಗಳನ್ನು ಬೇಕಾದರೆ ಕೊಡುತ್ತೇನೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಸನ ಜಿಲ್ಲೆಯಲ್ಲಿ ರೆವೆನ್ಯೂ ಕಮಿಷನರು ಬಂದಿದ್ದಾಗ, ಅರ್ಧ ಖರ್ಚನ್ನು ಸರ್ಕಾರದವರು ಕೊಟ್ಟರೆ ರೈತರು ಇನ್ನರ್ಧವನ್ನು ಕೊಡಬೇಕೆಂದು ಮುಚ್ಚಳಿಕೆ ಬರೆದುಕೊಡಬೇಕೆಂದು ಕೇಳಿದುದು ನಿಜವೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಅರೀತಿ ಕೇಳಿದ್ದರೆ ಏನು ಎಂಬುದನ್ನು ವಿಚಾರಣೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಳೀಯ ಅಧಿಕಾರಿಗಳಿಗೆ ತಿಳಿಸಿದ್ದೇವೆ, ಹಾಗೆ ಮುಚ್ಚಳಿಕೆ ಕೇಳಬೇಕಾದ್ದಿಲ್ಲವೆಂದು.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್).—1952—53ನೆಯ ಸಾಲಿನಲ್ಲಿ ತುಮಕೂರು ಡಿಸ್ಟ್ರಿಕ್ಟಿಗೆ ಎಷ್ಟು ಹಣ ಕೊಟ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ರೆವೆನ್ಯೂ ಕಮಿಷನರವರು ಮುಚ್ಚಳಿಕೆ ಬರೆದುಕೊಡಬೇಕೆಂದು ಕೇಳಿದರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆಮೇಲೆ ಮುಚ್ಚಳಿಕೆ ಬರೆಸಿಕೊಳ್ಳಬೇಡಿ ಎಂದು ಹೇಳಿದೆ.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಕೇವಲ ಕೋಲಾರ, ಚಿತ್ರದುರ್ಗ, ತುಮಕೂರು ಇವುಗಳಿಗೆ ಮಾತ್ರ ದೊರಕಿದೆಯೆಂದಿದೆ ; ಮಿಕ್ಕದ್ದನ್ನು ಬಿಡಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಪ್ರಶ್ನೆಯನ್ನು ಓದಿ. 1951—52ನೆಯ ಸಾಲಿಗೆ ಸಂಬಂಧಪಟ್ಟ ಪ್ರಶ್ನೆ ಇದು.

ಶ್ರೀ ಬಿ. ರಾಚಯ್ಯ.—ಯಳಂದೂರು ತಾಲ್ಲೂಕಿನಲ್ಲಿ 9 ಗ್ರಾಮಗಳಲ್ಲಿ ಬೆಳೆಯಾಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

QUESTIONS FOR ANSWERS FOR THE DAY.

(Not taken up.)

Provision of electric lights to Thyamagondlu, Dobspet and Sivagange in Nelamangala Taluk.

Q.—528. **Sri D. M. GOVINDA RAJU** (Nelamangala).—

Will the Government be pleased to state :—

(*a*) whether it is a fact that the work is under execution to provide electric lights to Thyamagondlu, Dobspet and Sivagange in Nelamangala Taluk, Bangalore District ;

(*b*) the amount estimated in this respect ;

(*c*) in how many days it would be possible to complete the work and to supply electricity ?

A.—**Sri T. SIDDALINGAIYA** (Minister for Industries).—

(*a*) Yes.

(*b*) Rs. 4,46,000.

(*c*) About two to two and a half months' after railway guarding, which has to be put up, is approved by the railway authorites.

Supply of electricity to Kariganur Village, Channagiri Taluk.

Q.—544. **Sri GANGA NAYAK** (Sorab-Shikaripur—Scheduled Castes).—

Will the Government be pleased to state :—

(*a*) whether it has come to their notice that though an estimate for supplying electricity to Kariganur Village, Channagiri Taluk has been prepared it has not been sanctioned as yet ;

(*b*) whether they would sanction it and arrange for starting the work soon ?

A.—**Sri T. SIDDALINGAIYA** (Minister for Industries).—

(*a*) As estimate for power supply to Kariganur at a cost of Rs. 48,500 has been prepared and is kept pending for want of grants.

(*b*) Work will be taken up when the estimate is sanctioned and when funds become available.

Mr. SPEAKER.—We shall now take up non-official business.

Invitation issued by the Secretary in connection with Dr. Visvesvaraya's Lectures.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಖಾಸಗಿ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಒಂದು ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಬೇಡುತ್ತೇನೆ. ಅದು ಈಗ ತಾವೆ ಈ ಸಭೆಯ ಕಾರ್ಯ-